**ಸಿ.ಸಿ.ನಂ. 51/2015**
ಪಿ.ಡಬ್ಲ್ಯೂ: 1

ದಿನಾಂಕಃ 07.10.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲುಃ ಆರೋಪಿತರುಗಳ ಪರವಾಗಿ ಶ್ರೀ ಬಿ. ಆರ್. ವಕೀಲರಿಂದಃ**

ಮೀಟರ್ ಬೋರ್ಡ್ ಸಂಖ್ಯೆಗಳು ಯಾವಾಗ ಬದಲಾಯಿತು ಎಂಬ ಮಾಹಿತಿ ನನಗೆ ಇರುವುದಿಲ್ಲ, ಸಾಕ್ಷಿಯು ಮುಂದುವರಿದು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ 2012 ರಲ್ಲಿ ಅರ್ಜಿ ಹಾಕಿದ್ದೆವು, ಆಗ ತಿಳಿಯಿತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ಸ್ವತ್ತಿನ ಮಾಲೀಕರಾಗಿದ್ದರು. 2012 ರವರೆಗು ನನ್ನ ತಂದೆ ನಮಗೆ ದಾನಪತ್ರ ಬರೆದುಕೊಡುವವರೆಗು ಮಾಲೀಕರಾಗಿದ್ದರು. 2012 ರಲ್ಲಿ

ಖಾತೆ ನನ್ನ ತಂದೆಯ ಹೆಸರಿನಲ್ಲಿತ್ತು. 2012 ರಲ್ಲಿ ವರುಣ್ ಮತ್ತು ಹೇಮಂತ್ ರವರ ಹೆಸರಿಗೆ ಖಾತೆ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ಆದರೆ ಈಗ ಖಾತೆ ಇದೆ ಎಂದು ನುಡಿಯುತ್ತಾರೆ. ಫಿರ್ಯಾದುದಾರರು ಸ್ವತ್ತಿನ ಮಾಲೀಕರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಈಗ ಒಟ್ಟು 9 ಮೀಟರ್ ಗಳು ಇವೆ. 9 ಮನೆಗಳಿವೆ. ನನ್ನ ತಂದೆಗೆ 9 ಮನೆಗಳಿಗು ಹಕ್ಕು ಇರುವುದಿಲ್ಲ, ಸಾಕ್ಷಿಯು ಮುಂದುವರಿದು 2 ನೇ ಆರೋಪಿಯ ಸ್ವತ್ತಿನಲ್ಲೂ ಮನೆಗಳು ಇದ್ದು, ಇಬ್ಬರಿಗು ಸಮನಾಗಿ ಹಕ್ಕು ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 9 ಮೀಟರ್ ಗಳಿಗು ನನ್ನ ತಂದೆ ಮಾಲೀಕರಾಗಿದ್ದರೋ ಇಲ್ಲವೊ ಎಂದು ನನಗೆ ತಿಳಿದಿರುವುದಿಲ್ಲ. ಹೌಸಿಂಗ್ ಬೋರ್ಡ್ ಸೊಸೈಟಿಯಲ್ಲಿ ಯಾವಾಗ ಲೋನ್ ಪಡೆದಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಮನೆ ಕಟ್ಟುವ ಸಾಲ ಪಡೆಯಲಾಗಿರುತ್ತದೆ. ಮನೆಯನ್ನು 1986 ರ ನಂತರ ನಿರ್ಮಿಸಲಾಗಿರುತ್ತದೆ. ಮನೆಯನ್ನು ಯಾವ ನಿರ್ಮಿಸಲಾಗಿದೆ ಎಂದು ನನ್ನ ತಂದೆಗೆ ತಿಳಿದಿರುತ್ತದೆ. ನಾನು ಮನೆ ನಿರ್ಮಿಸಲು ಲೋನನ್ನು ಪಡೆದಿರುತ್ತೇನೆ. ಹೌಸಿಂಗ್ ಲೋನನ್ನು ಹಂತ ಹಂತವಾಗಿ ನೀಡುತ್ತಾರೆ ಎಂದರೆ ಸರಿ. ಹೌಸಿಂಗ್ ಲೋನ್ ನಲ್ಲಿ ಅಡಿಪಾಯ ಹಾಕಿದಾಗ ನಂತರ ಮನೆ ಸ್ವಲ್ಪ ಕಟ್ಟಿದಾಗ ಹಾಗೂ ರೂಫಿಂಗ್ ಮಾಡುವಾಗ ಮತ್ತು ಕೊನೆಯಲ್ಲಿ ಹಂತ ಹಂತವಾಗಿ ಸಾಲ ಬಿಡುಗಡೆ ಮಾಡುತ್ತಾರೆ ಎಂದರೆ ಸರಿ.

ಸದರಿ ಸಾಲವನ್ನು ಹಂತ ಹಂತವಾಗಿ ಬಿಡುಗಡೆ ಮಾಡುವಾಗ ಬ್ಯಾಂಕಿನ ಅಧಿಕಾರಿಗಳು ಬಂದು ಪರಿಶೀಲಿಸಿ ನಂತರ ಹಣ ಬಿಡುಗಡೆ ಮಾಡುತ್ತಾರೆ ಎಂದರೆ ಸರಿ. ಪ್ರಸ್ತುತ ಸಾಲವನ್ನು ಹೌಸಿಂಗ್ ಬೋರ್ಡ ನವರು ಎಷ್ಟು ಹಂತಗಳಲ್ಲಿ ಸಾಲ ನೀಡಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ಹೌಸಿಂಗ್ ಬೋರ್ಡನವರು ಎಷ್ಟು ಹಂತಗಳಲ್ಲಿ ಸಾಲ ಬಿಡುಗಡೆ ಮಾಡಿರುತ್ತಾರೆ ಎಂದು ನಾವು ಕೇಂದ್ರ ಕಛೇರಿಯಲ್ಲಿ ತಿಳಿದುಕೊಂಡಿರುತ್ತೇವೆ. ಯಾವ ಹಂತದಲ್ಲಿ ಮತ್ತು ಯಾವ ದಿನಾಂಕದಂದು ಹಣ ಬಿಡುಗಡೆ ಆಗಿದೆ ಎಂದು ನಾವು ಪರಿಶೀಲಿಸಿರುವುದಿಲ್ಲ. ಸದರಿ ಸಾಲದ ಜಾಮೀನುದಾರರು ಯಾರು ಎಂದು ನನಗೆ ತಿಳಿದಿರುವುದಿಲ್ಲ. 1 ನೇ ಆರೋಪಿಯು ಸದರಿ ಸಾಲಕ್ಕೆ ಜಾಮೀನುದಾರರಾಗಿದ್ದರು ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

ಸಾಮಾನ್ಯವಾಗಿ ಲೋನ್ ಪಡೆಯುವ ಸಮಯದಲ್ಲಿ ಸ್ವತ್ತನ್ನು ಬ್ಯಾಂಕಿಗೆ ಆಧಾರ ಮಾಡಿಕೊಡಲಾಗುತ್ತದೆ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಆಧಾರ ಪತ್ರ ನೊಂದಣಿಯಾದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸಾಲ ತೀರುವಳಿಯಾದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಸಾಕ್ಷಿ ಮುಂದುವರಿದು ಸಾಲ ತೀರುವಳಿ ಆಗಿಲ್ಲ ಎಂದು ನನಗೆ ಕೇಂದ್ರ ಕಛೇರಿಯಲ್ಲಿ ತಿಳಿಸಿದರು. ಆಧಾರ ಪತ್ರಕ್ಕೆ ಯಾರು ಸಾಕ್ಷಿದಾರರು ಮತ್ತು ಬಿಕಲಂ ಯಾರು ಎಂದು ತಿಳಿದಿರುವುದಿಲ್ಲ. ಆಧಾರ ಪತ್ರ ನೊಂದಾಯಿಸಲು ಹೌಸಿಂಗ್ ಬೋರ್ಡ ನ ಕಾರ್ಯದರ್ಶಿ, ಸಾಲ ಪಡೆಯುವವರು, ಜಾಮೀನುದಾರರು ಮತ್ತು ಸಾಕ್ಷಿಗಳು ಇದ್ದರು ಎಂದರೆ ಸರಿ. ಸಾಕ್ಷಿದಾರರುಗಳಿಗೆ ಆ ದಿನ ಯಾರು ಹಾಜರಿದ್ದರು ಎಂದು ತಿಳಿದಿರುತ್ತದೆ ಎಂದರೆ

ಸರಿ. ಸಾಕ್ಷಿದಾರರನ್ನು ಮತ್ತು ಇತರರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ಹೌಸಿಂಗ್ ಬೋರ್ಡ್ ಕಾರ್ಯದರ್ಶಿ ಯಾರು ಎಂದು ತಿಳಿದಿರುವುದಿಲ್ಲ. ಹೌಸಿಂಗ್ ಬೋರ್ಡ್ ನ ವಹಿವಾಟನ್ನು ಯಾರು ನೋಡಿಕೊಳ್ಳುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಯಾವುದೇ ಸಹಿಯನ್ನು ನಕಲು ಮಾಡಿಲ್ಲ ಮತ್ತು ಮೋಸದಿಂದ ಮೀಟರ್ ಬೋರ್ಡ್ ಪಡೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದೆಲ್ಲ ನಿಜ ಎಂದು ನನ್ನ ತಂದೆ ನನಗೆ ಹೇಳಿದ್ದರು. ಆದ್ದರಿಂದ ಅದನ್ನು ನಾನು ಈ ದಿನ ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ದೂರಿನಲ್ಲಿ ಹೇಳಿರುವಂತೆ ಪಿರ್ಯಾದುದಾರರು ಮನೆಯ ಮಾಲೀಕರಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ನಮೂದಿಸಿರುವಂತೆ ಆರೋಪಿಗಳು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. 9 ಮನೆಗಳನ್ನು 2 ನೇ ಆರೋಪಿಯೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ಮನೆ ನಿರ್ಮಿಸಿದಾಗಿನಿಂದಲೂ 2 ನೇ ಆರೋಪಿಯೇ ಮನೆಯನ್ನು ನೋಡಿಕೊಳ್ಳುತ್ತಿದ್ದಾರೆ.

**<u>ಮರು ವಿಚಾರಣೆ : ಇಲ್ಲ</u>**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,
ಕಡೂರು.